

# ನೋವಾಗದ ಮನುಷ್ಯ



ನಮ್ಮ ಚರ್ಮವನ್ನು ಬೆರಳಿನಿಂದ ಅರ್ಧ ಇಂಚು ಎಳೆದರೂ ತಾಳಲಾಗದ ನೋವು ಆಗುತ್ತದೆ. ಆದರೆ ಈ ವ್ಯಕ್ತಿಗೆ ನೋವು ಅಂದರೆ ಏನೆಂಬುದೇ ಗೊತ್ತಿಲ್ಲ! ಯಾಕೆಂದರೆ ಕಬ್ಬಿಣದ ಕ್ಲಿಪ್ ಹಾಕಿ ಇವನು 15.8 ಸೆಂ.ಮೀ.ತನಕ ಮುಖದ ಚರ್ಮವನ್ನು ಎಳೆಯಬಲ್ಲ! ಏಕಕಾಲದಲ್ಲಿ ದೇಹದ ಬೇರೆ ಬೇರೆ ಭಾಗಗಳಲ್ಲಿ ಹಲವಾರು ಕ್ಲಿಪ್ಪುಗಳನ್ನು ಹಾಕಿ ಎಳೆದರೂ ಇವನ ಚರ್ಮ ಬಲೂನಿನಂತೆ ಎಳೆದಷ್ಟೂ ಮುಂದೆ ಬರುತ್ತದೆಯೇ ವಿನಃ ಇವನು ಅಯ್ಯೋ ಎನ್ನುವುದಿಲ್ಲ!

ಇವನ ಹೆಸರು ಗ್ಯಾರಿ, ಆಸ್ಟ್ರೇಲಿಯಾ ಇವನ ದೇಶ. ತನ್ನ ಚರ್ಮದ ಈ ವಿಶೇಷ ಶಕ್ತಿಯ ಬಗ್ಗೆ ಗಿನ್ನೆಸ್ ದಾಖಲೆಯೊಂದನ್ನು ದಾಖಲಿಸಲು ಈತ ಮುಂದಾದಾಗ 32 ಮಂದಿ ಸ್ಪರ್ಧೆಯ ಕಣದಲ್ಲಿದ್ದರು. ಅವರನ್ನೆಲ್ಲ ಸೋಲಿಸಿ ಜಗತ್ತಿನಲ್ಲಿ ತಾನೊಬ್ಬನೇ ನೋವಾಗದ ಮನುಷ್ಯ ಎಂದು ಸಾಬೀತುಪಡಿಸಿದ್ದಾನೆ. ಗಿನ್ನೆಸ್ ದಾಖಲೆಯಲ್ಲಿ ತನ್ನ ಹೆಸರನ್ನು ನೋಂದಾಯಿಸಿದ ಗ್ಯಾರಿಯ ನಗುಮುಖವನ್ನು ಕಂಡು ಬಂದ ಸ್ಪರ್ಧಿಗಳೆಲ್ಲ 'ನೋ ವೇ..' ಎಂದಂದು ಮರಳಿ ಹೋದರಂತೆ!

■ ಪ.ರಾಮಕೃಷ್ಣ ಶಾಸ್ತ್ರಿ